ಅಧ್ಯಕ್ಷರು: ರಾಜಶೇಖರ ಬಸವರಾಜ್ ಪಾಟೀಲ್‌ರವರೇ ತಮ್ಮ ಪ್ರಶ್ನೆ ಕಂದಾಯ ಇಲಾಖೆಯಿಂದ ಆಹಾರ ಇಲಾಖೆಗೆ ವರ್ಗಾವಣೆ ಯಾಗಿದೆ. ಆದ್ದರಿಂದ, ಅದಕ್ಕೆ ಉತ್ತರ ಬಂದಿಲ್ಲ. ಮುಂದೆ ಅದಕ್ಕೆ ಉತ್ತರ ಕೊಡಿಸುತ್ತೇನೆ.

ಶ್ರೀ ರಾಜಶೇಖರ ಬಸವರಾಜ್ ಪಾಟೀಲ್: ಈ ಅದಿವೇಶನದಲ್ಲಿ ನನ್ನ ಮೂರು ಪ್ರಶ್ನೆಗಳು ಬಂದಿವೆ. ದಿನಾಂಕ 28, 29 ಮತ್ತು 30 ಈ ಮೂರು ದಿನವೂ ಪ್ರಶ್ನೆಗಳಿದ್ದವು. ಈ ಮೂರು ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಯ ಬಗ್ಗೆ ಮಾತನಾಡಲೂ ಅವಕಾಶ ಸಿಗಲಿಲ್ಲ. ಹುಮ್ನಾಬಾದ್ ಬಸ್ ನಿಲ್ದಾಣದ ಬಗ್ಗೆ ಕೇಳಿದ್ದೇನೆ.

ಅಧ್ಯಕ್ಷರು: ಆಯಿತು, ಬೇರೆಯದಕ್ಕೆ ಅವಕಾಶ ಕೊಡೋಣ. ಇನ್ನು ಮುಂದೆ ಅದನ್ನು ಸರಿಮಾಡೋಣ.

ರಾಜ್ಯಕ್ಕೆ 734 ಟಿ.ಎಂ.ಸಿ. ನೀರಿನ ಹಂಚಿಕೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**75 (377)**
ಸದಸ್ಯರ ಹೆಸರು	:	**ಶ್ರೀ ಟಿ.ಬಿ.ಜಯಚಂದ್ರ (ಶಿರಾ)**
ಉತ್ತರಿಸುವ ಸಚಿವರು	:	**ಬಸವರಾಜ್ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)**

ಅ. ಸ್ಕೀಂ – ಎ ಅಡಿಯಲ್ಲಿ ರಾಜ್ಯಕ್ಕೆ 734 ಟಿ.ಎಂಸಿ ನೀರು ಹಂಚಿಕೆಯಾಗಿರುವ ಪ್ರಕಾರ ಯಾವ ಯಾವ ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ಪ್ರಗತಿಯಲ್ಲಿರುವ ಯೋಜನಾ ಕಾಮಗಾರಿಗಳು ಯಾವುವು: ಹೊಸ ಯೋಜನೆಗಳು ಯಾವುವು ಹಾಗೂ 734 ಟಿಎಂಸಿ ನೀರಿನಲ್ಲಿ ಬಳಕೆ ಆಗುತ್ತಿರುವ ನೀರಿನ ಪ್ರಮಾಣ ಎಷ್ಟು:

ಸ್ಕೀಂ – ಎ ಅಡಿಯಲ್ಲಿ ರಾಜ್ಯಕ್ಕೆ ಹಂಚಿಕೆ ಯಾಗಿರುವ 734 ಟಿಎಂಸಿ ಅನುಸಾರ

ಪೂರ್ಣಗೊಳಿಸಲಾಗಿರುವ ಯೋಜನೆಗಳ ಸಂಖ್ಯೆ : 29.

ಮುಕ್ತಾಯ ಹಂತದಲ್ಲಿರುವ ಯೋಜನೆಗಳ ಸಂಖ್ಯೆ: 19.

ಪ್ರಗತಿಯಲ್ಲಿರುವ ಯೋಜನೆಗಳ ಸಂಖ್ಯೆ:13.

ಹೊಸ ಯೋಜನೆಗಳು – ಯಾವುದೂ ಇರುವುದಿಲ್ಲ (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಕೈಗಾರಿಕೆ, ಕುಡಿಯುವ ನೀರು ಮತ್ತು ಚೆನ್ನೈನೀರು ಸರಬರಾಜು ಸೇರಿದಂತೆ ಈವರೆಗೆ 598.24 ಟಿಎಂಸಿ ನೀರಿನ ಬಳಕೆ ಮಾಡಲಾಗಿದೆ.

ಅ. ಸ್ಕೀಂ – ಬಿ ಮೇಲೆ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳು ಈಗಾಗಲೇ ಕಾಮಗಾರಿಗಳನ್ನು ಕೈಗೊಂಡು ಪೂರ್ಣ ಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಸ್ಕೀಂ – ಬಿ ಮೇಲೆ ಆಂಧ್ರಪ್ರದೇಶ ಸರ್ಕಾರವು ಯೋಜನೆಗಳನ್ನು ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ. ಹಾಗಿದ್ದಲ್ಲಿ, ರಾಜ್ಯದಲ್ಲಿ ಯಾವುದಾದರೂ ಯೋಜನೆಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆಯನ್ನೇನಾದರೂ ಸರ್ಕಾರವು ನೀಡಿದೆಯೇ?

ಇಲ್ಲ.

COMPLETED PROJECTS
ANNEXURE 1

Sl. No.	Name of Project	Sub basin	Year of Commencement	Revised allocation as per Maste Plan 2002 (tmc)
1	Gokak Canal	K-3	1897-98	1.40
2	Ghataprabha (1,11)	K-3		87.70
	Stage 11		1948	
	Stage 11		1956	
3	Kolchi Weir	K-4	1952-53	0.70
4	Hathikuni	K-6	1973-74	0.40
5	Upper Muilamari	K-6	1984-85	108
6	Chandrampalli	K-6	1976-77	1.90
7	Jambadahalla	K-8	1967-68	0.70
8	Ambligola	K-8	1964-65	1.10
9	Anjanapaur	K-8	1936-37	2.50
10	Dharma	K-8	1964-65	1.10
11	Hagaribommanahalli	K-8	1972-73	2.00
12	Rajolibanda	K-8	1959-60	1.20

13	Tunga Anicut	K-8	1956-57	11.50
14	Bhadra Reservoir	K-8	1955-56	61.70
15	Bhadra Anicut	K-8	1923-24	3.10
16	Tungabhadra	K-8	1945-46	132.00
	RBLLC		1945	
	LBC		1945	
	RBHLC		1959	
17	Vijayanagar channel	K-8		12.05
18	Maskinala	K-8	1976	0.78
19	Gayathri	K-9	1963-64	0.45
20	Vanivilassagar	K-9	1907-08	5.25
21	Areshankar	K-2	1957-58	0.20
22	Chitwadgi	K-2	1972-73	0.10
23	Kalaskop	K-3	1959-60	0.14
24	Nagathana	K-6	1960-61	0.12
25	Ramanahalli	K-6	1957-58	.32
26	Soudhaghar	K-6	1982-83	0.26
27	Narithalla	K-8	1978-79	0.90
28	Kanakanala	K-8	1972-73	.27
29	Narayanapura	K-9	1960-61	.74
	Total			331.66

PROJECTS IN ADVANCED STAGE
ANNEXURE-11

Sl. No.	Name of Project	Sub basin	Year of Commencement	Revised allocation as per Master Plan 2002 (tmc)
1	Malaprabha	K-4	1972-73	27.00

2	Upper Krishna Project	K-2		173.00
	Stage 1		1969	
	Stage 11		1995	
3	Amarja	K-6	1975	1.92
4	Hirehalla	K-8	1977	2.27
5	Ghataprabha Stage-111	K-3		
6	Dudhaganga	K-1	1992	4.00
7	Hipparagi	K-2	1973	12.10
8	Markandeya	K-3	1991	4.00
9	Harinala	K-4	1998	0.64
10	Ramthal Lift	K-4	2004	4.50
11	Bhima Lift	K-6	1993	6.00
12	Gandhorinala	K-6	1993	2.16
13	Bennithora	K-6	1973	5.75
14	Lower Mullamari	K-6	1973	2.61
15	Bhima Barrages	K-6		5.00
16	Upper Tunga]	K-8	1991	12.24
17	Singatlur	K-8	1998	18.55
18	Basapur LIS	K-8	1993	0.60
19	Itagi-Sasalwad	K-8	1994	0.55
	Total			282.89

PROJECTS IN PROGRESS
ANNEXURE 111

1	Sri Rameshware LIS	K-3	2005	2.2.
2	Teggi-Siddapura LIS	K-2	2005	0.90
3	Bellarynala Flow Cut	K-3	2005	1.91
4	Javalahalia LIS	K-4	2005	0.29
5	Bennihalla	K-4	2005	1.80
6	Kolchi LIS	K-4	2005	0.30

7	Konnur LIS	K-4	2005	0.39
8	Sonthi	K-6	2005	4.00
9	Kagna	K-6	2005	2.00
10	Guddadamallapura	K-8	2005	1.00
11	Bakrihalla	K-8	2005	0.21
12	Upper Bhadra	K-8		10.00
13	F.C.to Ranikere	K-9	1979	0.30
	Total			**25.30**
	Other needs			
1	Drinking Water Supply			1.50
2	Industrial uses			0.50
3	Chenni Water Supply			5.00
	Total			**7.00**
MINOR IRRIGATION				**87.15**
	Grand total			**734.00**

ಶ್ರೀ ಟಿ.ಬಿ.ಜಯಚಂದ್ರ: ನನ್ನ ಪ್ರಶ್ನೆಗೆ ತಾವು ಉತ್ತರವನ್ನು ಕೊಟ್ಟಿದ್ದೀರಿ. ಪೂರ್ಣ ಗೊಳಿಸಲಾಗಿರುವ ಯೋಜನೆಗಳ ಸಂಖ್ಯೆ–29, ಮುಕ್ತಾಯ ಹಂತದಲ್ಲಿರುವ ಯೋಜನೆಗಳ ಸಂಖ್ಯೆ–19, ಪ್ರಗತಿಯಲ್ಲಿರುವ ಯೋಜನೆಗಳ ಸಂಖ್ಯೆ–13 ಎಂದು ಹೇಳಿದ್ದೀರಿ. ಹೊಸ ಯೋಜನೆಗಳು ಯಾವುದೂ ಇಲ್ಲ ಅಂದರೆ ಎಲ್ಲವೂ on going projects ಅನ್ನುವ ರೀತಿಯಲ್ಲಿ ಹೇಳಿದ್ದೀರಿ. ತಾವು Annexure ನಲ್ಲಿ ಕೊಟ್ಟಿರುವ Projects in Progress ಎನ್ನುವುದರಲ್ಲಿ Upper Bhadra ಎನ್ನುವುದಕ್ಕೆ year of commencement blank ಬಿಟ್ಟಿದ್ದೀರಿ. ಅಂದರೆ, ಅದು ಇನ್ನೂ ಪ್ರಾರಂಭವಾಗಿಲ್ಲ ಎಂದು ತಾವು ಉತ್ತರ ಕೊಟ್ಟಿದ್ದೀರಿ. ತಾವು ಯಾವತ್ತು ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟು ಕೆಲಸ ಮಾಡುತ್ತೀರಿ ಎನ್ನುವುದು ಒಂದು ನೇರವಾದ ಪ್ರಶ್ನೆ. ನನ್ನ ಎರಡನೆಯ ಪ್ರಶ್ನೆಯಲ್ಲಿ, ಸ್ಕೀಂ–ಬಿ ಮೇಲೆ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳು ಈಗಾಗಲೇ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ ಬಂದಿದೆ ಎನ್ನುವ ಉತ್ತರವನ್ನು ಕೊಟ್ಟಿದ್ದೀರಿ. ಹಾಗಿದ್ದರೆ, ನಮ್ಮ ಕರ್ನಾಟಕದಿಂದ ಏನಾದರೂ ಯೋಜನೆಗಳಿವೆಯೇ ಎಂದರೆ ಏನೂ ಎಲ್ಲ ಎಂದು ಹೇಳುತ್ತೀರಿ. ತಮ್ಮ ಉತ್ತರವನ್ನು ಇಡೀ ರಾಜ್ಯದ ಜನ ನೋಡುತ್ತಿರುತ್ತಾರೆ. ಈಗಾಗಲೇ ಮಹಾರಾಷ್ಟ್ರದವರು ಮತ್ತು

ಆಂಧ್ರದವರು ಸ್ಕೀಂ–ಬಿ ಅಲೋಕೇಷನ್‌ನ ಕಾಮಗಾರಿಗಳನ್ನು ಮುಗಿಸಿದ್ದಾರೆ. ನಾವು ಅದನ್ನು ನೋಡಿಕೊಂಡು ಕುಳಿತಿದ್ದೇವೆ. ಯಾವುದೇ ಹೊಸ ಯೋಜನೆಯನ್ನು ನಾವು ಸ್ಕೀಂ–ಬಿನಲ್ಲಿ ತೆಗೆದುಕೊಳ್ಳುವುದಿಲ್ಲ ಎಂದರೆ ಕೋರ್ಟ್ ತೀರ್ಮಾನಕ್ಕೋಸ್ಕರ ನಾವು ಕಾಯ್ದುಕೊಂಡು ಕುಳಿತಿದ್ದೇವೆಯೇ? ಈ ವ್ಯತ್ಯಾಸ ಏಕೆ? ಅವರು ಕಾಮಗಾರಿಗಳನ್ನು ಮಾಡಿದರು ಎಂದರೆ, ನಮಗೆ ತಾಕತ್ತಿದ್ದರೆ ಅದನ್ನು ನಿಲ್ಲಿಸಬೇಕು, ಇಲ್ಲವೆಂದರೆ ನಾವೂ ಕಾಮಗಾರಿಗಳನ್ನು ಪ್ರಾರಂಭ ಮಾಡಬೇಕು. ಆ ತರಹದ್ದು ಏನಾದರೂ ನಿರ್ಧಾರ ಮಾಡುವಿರಾ ಎಂದು ಹೇಳಬೇಕು.

ಶ್ರೀ ಬಸವರಾಜ ಬೊಮ್ಮಾಯಿ: ಅವರು ಕೇಳಿರುವಂಥ ಪ್ರಮುಖ ಪ್ರಶ್ನೆ ಸ್ಕೀಂ–ಬಿ ಬಗ್ಗೆ ಎಂದು ನನಗನ್ನಿಸುತ್ತದೆ. Upper Bhadra ಬಗ್ಗೆ ಈಗಾಗಲೇ tender ಆಗಿದೆ. ಅದು T.A.C. ಮುಂದೆ approval ಆದಮೇಲೆ ನೇರವಾಗಿ administrative sanction ಬರುತ್ತದೆ. ಅದನ್ನು ಶೀಘ್ರದಲ್ಲೇ ಮಾಡುತ್ತೇವೆ. ಅದರಲ್ಲೇನು ತೊಂದರೆಯಿಲ್ಲ. ತಾವು ಮುಖ್ಯವಾಗಿ ಕೇಳುತ್ತಿರುವುದು, ಸ್ಕೀಂ–ಬಿ ಅಡಿಯಲ್ಲಿ ಬೇರೆ ರಾಜ್ಯಗಳು ಕಾಮಗಾರಿ ಮಾಡುತ್ತೇವೆ ಎನ್ನುವುದಾಗಿದೆ. ಸ್ಕೀಂ–ಬಿಯಲ್ಲಿ ಬೇರೆ ರಾಜ್ಯಗಳು ಕಾಮಗಾರಿ ಮಾಡಿದಾಗ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟಿಗೆ ಹೋಗಿ ಎಲ್ಲಾ ಆಗಿ, 1997ರಲ್ಲಿ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬಂದು, ಅವರು ಕಾಮಗಾರಿಯನ್ನು ಮಾಡಿದರು ಕೂಡ ಅವರಿಗೆ ಯಾವುದೇ ಹಕ್ಕಿಲ್ಲ, they can't exercise their right ಎನ್ನುವ ತೀರ್ಮಾನ ಬಂದಿದ್ದು, ಅದರ ಮೇಲೆ ಅವರು ಮಾಡುತ್ತಿದ್ದಾರೆ. ನಿಮ್ಮ ಭಾವನೆ ಏನಿದೆ, ಅದಕ್ಕೆ ತಕ್ಕ ಹಾಗೆ, ನಾನು ಈ ಇಲಾಖೆಗೆ ಬಂದ ಮೇಲೆ ಉತ್ತರ ಕೊಡುವಾಗ ಈ ರೀತಿ ಉತ್ತರವನ್ನು ಕೊಟ್ಟಮೇಲೂ ಕೂಡ, ನಾನು ಮೊನ್ನೆಯ ದಿವಸ ಅಧಿಕಾರಿಗಳ ಸಭೆಯನ್ನು ಕರೆದು ಒಂದು ಆಡಳೀತಾತ್ಮಕ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ, ಸ್ಕೀಂ–ಬಿಯಲ್ಲಿ ನಾವು ಯಾವಯಾವ ಯೋಜನೆಗಳನ್ನು ಹಾಕಿಕೊಂಡಿದ್ದೇವೆ, ಆ ಯೋಜನೆಗಳ ಎಲ್ಲಾ ಕಾರ್ಯವನ್ನು ಪ್ರಾರಂಭ ಮಾಡಬೇಕು, ನಾವು ಕಾಯಬಾರದು ಎಂದು ಈಗಾಗಲೇ ನಾನು ಆದೇಶವನ್ನು ಕೊಟ್ಟಿದ್ದೇನೆ. ಈಗಾಗಲೇ ಕಾರ್ಯ ಪ್ರಾರಂಭವಾಗಿದೆ. ಉದಾಹರಣೆಗೆ ಹೇಳಬೇಕೆಂದರೆ, ತಮ್ಮ ಯೋಜನೆ ಏನಿದೆ ಅದೂ ಕೂಡ detailed survey ಆಗಿ T.A.C. ಮುಂದೆ ಕೂಡಲೇ ಬರಬೇಕು ಎಂದು ನಾನು ಆದೇಶವನ್ನು ಕೊಟ್ಟಿದ್ದೇನೆ. ಆದ್ದರಿಂದ ಇನ್ನು ಮುಂದೆ ಕಾಯುವ ಪ್ರಶ್ನೆಯೇ ಇಲ್ಲ. ಕರ್ನಾಟಕ ಜನತೆ ಯಾವಾಗಲೂ ಕಾನೂನ್ನು ಬಿಟ್ಟು ಹೋಗುವವರಲ್ಲ. ನಮ್ಮ ಪರಿಸ್ಥಿತಿ ಏನಿದೆ ಎಂದರೆ ಒಂದು ಕಡೆ upper riparian, ಇನ್ನೊಂದು ಕಡೆ low riparian. Mid riparian seat ಯಾವಾಗಲೂ ಕೂಡ suffer ಆಗುತ್ತದೆ. ಇವತ್ತು ಕೃಷ್ಣಾ ನದಿಯ

ಅತಿ ಹೆಚ್ಚಿನ rain ferd area ಇರುವುದು ಕರ್ನಾಟಕದಲ್ಲಿ, longest ಹರಿಯುವುದು ಕರ್ನಾಟಕದಲ್ಲಿ. ಆದರೆ ನೀರನ್ನು utilize ಮಾಡಿಕೊಳ್ಳುವುದು ಮಾತ್ರ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದವರು. ಮಹಾರಾಷ್ಟ್ರ ದವರು ಬಿಟ್ಟಷ್ಟು ನೀರನ್ನು ನಾವು ತೆಗೆದುಕೊಳ್ಳಬೇಕು, ಮತ್ತೆ ಆಂಧ್ರಕ್ಕೂ ಕೊಟ್ಟು ನಂತರ ನಾವು ನಮ್ಮ ನೀರನ್ನು ಬಳಕೆ ಮಾಡಿಕೊಳ್ಳಬೇಕು. ಉದಾಹರಣೆಗೆ ಹೇಳಬೇಕಾದರೆ ಕಾರಂಜಾ ಯೋಜನೆಯನ್ನು 1972ರಲ್ಲಿ ಮಾಡಿದರೂ ಕೂಡ 1992ರಲ್ಲಿ ಅಂದರೆ 20 ವರ್ಷದ ನಂತರ C.W.C. ನಮಗೆ clearance ಕೊಟ್ಟಿದೆ. ಈ ರೀತಿಯ ಹಲವಾರು ತೊಂದರೆಗಳನ್ನು ಅನುಭವಿಸಿದ್ದು ಈಗಾಗಲೇ ತಡವಾಗಿದೆ. ಇನ್ನೊಂದು ವಿಷಯವೆಂದರೆ, ಹಿಂದೆ ನೀರಾವರಿ ಬಗ್ಗೆ ನಮ್ಮ ಕರ್ನಾಟಕದಲ್ಲಿ ಜಾಗೃತಿ ಇರಲಿಲ್ಲ ಎನ್ನುವುದು ಈಗಾಗಲೇ ಸಾಬೀತಾಗಿದೆ. ಈಗ ನೀರಿನ ಬಗ್ಗೆ ಜಾಗೃತಿ ಬಂದಿದೆ. ತಾಕತ್ತಿದ್ದರೆ ಪ್ರಾರಂಭ ಮಾಡಬೇಕು ಎಂದು ಹೇಳಿದಿರಲ್ಲ, ಈ ಸರ್ಕಾರ ಬಂದ ಮೇಲೆ ಆ ತಾಕತ್ತನ್ನು ಪಡೆದುಕೊಂಡು ಪ್ರಾರಂಭ ಮಾಡಿದ್ದೇವೆ. ಹೀಗಾಗಿ, ನಿಮ್ಮ ಯೋಜನೆಗಳೇನಿವೆ, ಅವುಗಳನ್ನೆಲ್ಲಾ ಪೂರ್ಣಗೊಳಿಸುವ ಪ್ರಯತ್ನವನ್ನು ನಾವು ಮಾಡುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ: ನಿಮ್ಮ ಉತ್ತರವನ್ನು ನಾನು ಸ್ವಾಗತಿಸುತ್ತೇನೆ. ಆದರೆ ಸ್ಕೀಂ-ಎ ನಲ್ಲಿ ಇಲ್ಲಿಯವರೆಗೂ ನೀವು ಯೋಜನೆಗಳ ಮುಖೇನ ಉಪಯೋಗ ಮಾಡಿಕೊಂಡಿರುವುದು ಎಂದರೆ 734 T.M.C.ಯಲ್ಲಿ 600 T.M.C. ನೀರನ್ನು ಮಾತ್ರ. ಇನ್ನೂ 134 T.M.C.ಯಷ್ಟು ನೀರನ್ನು ನೀವು ಬಳಕೆ ಮಾಡಿಕೊಳ್ಳಬೇಕಾಗಿದೆ. ಹಾಗಾಗಿ ಇದಕ್ಕೆ ಬೇಕಾದಂಥ ಹಣವೆಷ್ಟು? ಎಷ್ಟು ವರ್ಷದಲ್ಲಿ ಮಾಡುವುದಕ್ಕೆ ಸಾಧ್ಯ? ಅದನ್ನು ಯಾವ ರೀತಿ planning ಮಾಡಿದ್ದೀರಿ? ಅದಕ್ಕೆ ಏನಾದರೊಂದು master plan ಇದೆಯೇ? ಯಾವತ್ತು ಕೊನೆಗಾಣಿಸಬೇಕು ಎನ್ನುವ ತೀರ್ಮಾನವೇನಾದರೂ ಇದೆಯೇ?

ಶ್ರೀ ಬಸವರಾಜು ಬೊಮ್ಮಾಯಿ : (ಮುಂದು)

ಈ ಯೋಜನೆಗಳನ್ನು ಸಂಪೂರ್ಣವಾಗಿ 2012ರೊಳಗಾಗಿ ಮುಗಿಸಬೇಕೆನ್ನು master plan ಮಾಡಿದ್ದೇವೆ. ಅದಕ್ಕೆ ಪ್ರತಿ ವರ್ಷ ನಮ್ಮ ಯೋಜನಾ ವಲಯದಿಂದ non plan, plan ನಿಂದ, ಕೇಂದ್ರ ವಲಯದಿಂದ ಎಷ್ಟೆಷ್ಟು ಬರಬೇಕೋ ಅದನ್ನು ಈ ಗಾಗಲೇ plan ಮಾಡಿ ಆ ಪ್ರಕಾರ programme ಅನ್ನು ಪ್ರಾರಂಭ ಮಾಡಿದ್ದೇವೆ. ಕಟ್ಟುನಿಟ್ಟಾಗಿ ಪ್ರತಿಯೊಂದು ಯೋಜನೆಯ ಪ್ರಗತಿಯನ್ನು 3 ತಿಂಗಳಿಗೊಮ್ಮೆ ಆ result ಅನ್ನು declare ಮಾಡಬೇಕು, ಬೇರೆ ಬೇರೆ embankment, canal making, distributory, sub distributory, feed canal ಎಲ್ಲಾ ವಿವಿಧ

sectors ನಲ್ಲಿ ಏನೇನು ಪ್ರಗತಿಯಾಗಿದೆ, ಅದರ ಬಗ್ಗೆ 3 ತಿಂಗಳಿಗೊಮ್ಮೆ Project wise declare ಮಾಡಬೇಕೆಂಬ ಕಟ್ಟುನಿಟ್ಟಿನ ಆದೇಶವನ್ನು ಕೊಟ್ಟಿದ್ದೇನೆ. ನಾವು ಖಂಡಿತವಾಗಿಯೂ war-footing ನಲ್ಲಿ ಈ ಯೋಜನೆಯನ್ನು ಮುಗಿಸುತ್ತೇವೆ.

ರೈತರ ಜಮೀನುಗಳನ್ನು ಸ್ವಾಧೀನಪಡಿಸಿ ಕೊಂಡಿರುವ ಬಗ್ಗೆ
ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**76 (359)**
ಸದಸ್ಯರ ಹೆಸರು	:	**ಶ್ರೀ ಸಂಪಂಗಿ ಎನ್.**
ಉತ್ತರಿಸುವ ಸಚಿವರು	:	**ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು.**

ಅ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇರುವ ಎಲ್ಲಾ ತಾಲ್ಲೂಕು ಗಳಲ್ಲಿರುವ ರೈತಾಪಿ ವರ್ಗದವರಿಂದ ಕೈಗಾರಿಕಾ ಸ್ಥಾಪನೆಯ ಸಲುವಾಗಿ ಭೂಸ್ವಾಧೀನ ಪಡಿಸಿಕೊಂಡಿರುವ ಸರ್ವೆ ನಂಬರುಗಳು ಯಾವುವು ಹಾಗೂ ಭೂ ಸ್ವಾಧೀನಪಡಿಸಿ ಕೊಂಡಿರುವ ರೈತರ, ಫಲಾನುಭವಿಗಳ ವಿವರ ಒದಗಿಸುವುದೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ತಾಲ್ಲೂಕುಗಳಲ್ಲಿನ ರೈತಾಪಿವರ್ಗದವರಿಂದ ಕೈಗಾರಿಕಾ ಪ್ರದೇಶ ಸ್ಥಾಪನೆ ಮತ್ತು ಏಕಘಟಕ ಸಂಕೀರ್ಣಗಾಳಿಗಾಗಿ ಭೂಸ್ವಾಧೀನಪಡಿಸಿಕೊಂಡಿರುವ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಸರ್ವೆ ನಂಬರುಗಳ ಮತ್ತು ಭೂಮಾಲೀಕರ ಹೆಸರು ಮತ್ತು ಸರ್ವೆ ನಂಬರುಗಳ ವಿಸ್ತೀರ್ಣಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ. ಫಲಾನುಭವಿಗಳ ವಿವರಗಳನ್ನು ಅನುಬಂಧ–2ರಲ್ಲಿ ಒದಗಿಸಲಾಗಿದೆ. ರೈತರಿಂದ ಸ್ವಾಧೀನಪಡಿಸಿಕೊಂಡಿರುವ ಜಮೀನಿನ ಪ್ರತಿ ಎಕರೆಗೆ ನಿಗದಿಗೊಳಿಸಿರುವ ಪರಿಹಾರದ ಮೊಬಲಗನ್ನು ಈ ಕೆಳಗೆ ನೀಡಲಾಗಿದೆ.

ಕ್ರ. ಸಂ	ತಾಲ್ಲೂಕಿನ ಹೆಸರು	ಸ್ವಾಧೀನಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣ (ಎಕರೆಗಳಲ್ಲಿ)
1	ಚಿಕ್ಕಬಳ್ಳಾಪುರ	97.07
2	ಶಿಡ್ಲಘಟ್ಟ	8.04
3	ಗೌರಿಬಿದನೂರು	245.17
4	ಬಾಗೇಪಲ್ಲಿ	192.00